**OS: 115-15** **PW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 25.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 4 ರಿಂದ 6 ರ ಪ್ರತಿವಾದಿ ಪರ ಶ್ರೀ ಎಸ್ ಆರ್ ಎ ವಕೀಲರಿಂದ ಃ**

ನಾನು ಇತರ ವಾದಿಗಳ ಪರವಾಗಿಯು ಸಹ ಸಾಕ್ಷಿ ಕೊಡುತ್ತಿದ್ದೇನೆ. ಉಳಿದ ವಾದಿಗಳು ನನಗೆ ಅಧಿಕಾರ ಪತ್ರ ಕೊಟ್ಟಿಲ್ಲ. ನನ್ನ ಮದುವೆ 2008 ರಲ್ಲಿ ಆಗಿದೆ. ಅದು ಅಂತರಜಾತಿ ವಿವಾಹ ಅಂದರೆ ಸರಿ. ನಾನು ಮುಸ್ಲಿಂ ಜಾತಿಯವರನ್ನು ಮದುವೆಯಾದ ಕಾರಣ ನನ್ನ ಹಾಗೂ ಪ್ರತಿವಾದಿ 1 ಹಾಗೂ 2 ರವರ ನಡುವೆ ಸಂಬಂಧ ಬಿರುಕು ಬಿಟ್ಟಿದೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ದೊಡ್ಡಪ್ಪ ಮತ್ತು 2 ನೇ ಪ್ರತಿವಾದಿ ನನ್ನ ಅಪ್ಪ ಏನು ಪ್ರತಿವಾದ ಪತ್ರ ಹಾಕಿದ್ದಾರೆ ಎಂದು ನಾನು ನೋಡಿಲ್ಲ. ಅವರು ಏನು ಪ್ರತಿವಾದ ಪತ್ರ ಹಾಕಿದ್ದೆ ಎಂದು ನಮ್ಮ ವಕೀಲರ ಮುಖಾಂತರ ಸಹ ಕೇಳಿ ತಿಳಿದುಕೊಂಡಿಲ್ಲ. ನನಗೆ ಒಬ್ಬಳನ್ನು ಬಿಟ್ಟರೆ ಬೇರೆ ವಾದಿಗಳಿಗೆ ಮತ್ತು 1 ಮತ್ತು 2 ನೇ ಪ್ರತಿವಾದಿಗಳಿಗೆ ಈ ದಾವೆಯಲ್ಲಿ ಯಾವುದೇ ಆಸಕ್ತಿ ಇಲ್ಲ ಅಂದರೆ ಸರಿಯಲ್ಲ. ನನಗೆ ಒಬ್ಬಳನ್ನು ಬಿಟ್ಟು ಬೇರೆಯವರು ಪ್ರಮಾಣ ಪತ್ರ ಹಾಕಿಲ್ಲ ಅಂದರೆ ಸರಿಯಲ್ಲ. ನಾನು ನನ್ನ ತಮ್ಮಂದಿರರ ಸಾಕ್ಷಿಯನ್ನು ಮಾಡಿಸುತ್ತೇನೆ.

ನಾನು ಮೊದಲಿನಿಂದಲೂ ಖರೀದಿದಾರರು ಅಂದರೆ 4 ರಿಂದ 6 ನೇ ಪ್ರತಿವಾದಿಗಳ ಮೇಲೆ ಈ ದಾವೆ ಮಾಡಿದ್ದೇನೆ. ಅದೇ ರೀತಿ ನನ್ನ ದೊಡ್ಡಪ್ಪ ಮತ್ತು ನನ್ನ ಅಪ್ಪ ಹಾಗೂ ಖುರ್ಷಿದ್ ಇವರ ಮೇಲೆ ಸಹ ಈ ದಾವೆ ಹಾಕಿದ್ದೇನೆ. ಇದಕ್ಕಿಂತ ಮೊದಲು ಖುರ್ಷಿದ್ ಇವರು ಅಸಲು ದಾವೆ ನಂಃ 217/10 ನ್ನು ನನ್ನ ತಂದೆಯ ಮೇಲೆ ಹಾಕಿದ್ದರು ಅಂದರೆ ಸರಿ. ಅದರಲ್ಲಿ ನಮ್ಮನ್ನು ಸಹ ಪಕ್ಷಕಾರರನ್ನು ಮಾಡುವಂತೆ ನಾವು ಅರ್ಜಿ ಹಾಕಿದ್ದೆವು ಅಂದರೆ ಸರಿ, ಆದರೆ ನಮಗೆ ಪ್ರತ್ಯೇಕ ದಾವೆ ಹಾಕುವಂತೆ ಮಾನ್ಯ ನ್ಯಾಯಾಲಯ ಆದೇಶ ಮಾಡಿದೆ.

ಆ ಅರ್ಜಿ ತಿರಿಸ್ಕಾರ ಮಾಡಿದ ನಂತರ ಈ ದಾವೆ ಹಾಕಿದ್ದೇವೆ ಅಂದರೆ ನಾವು ಇನ್ನು ಒಂದು ಬೇರೆ ದಾವೆಯನ್ನು ವಾಟ್ನಿ ಸಲುವಾಗಿ ಹಾಕಿದ್ದೇವೆಂದು ಸಾಕ್ಷಿ ನುಡಿಯುತ್ತಾರೆ. ಅದರ ನಂಃ 240/10 ಇದೆ. ಅದರ ಮೇಲೆ ಎಫ್ ಡಿ ಪಿ 37/11 ಹಾಕಿದ್ದೆವು ಅದರಲ್ಲಿ ನಾವು ರಾಜಿ ಮಾಡಿಕೊಂಡಿದ್ದೇವೆ. ನಾವು ಅಸಲು ದಾವೆ ನಂಃ 217/10 ರಲ್ಲಿ III Party ಅರ್ಜಿಯನ್ನು 2012 ರಲ್ಲಿ ಸಲ್ಲಿಸಿದ್ದೆವು ಅಂದರೆ ಸರಿಯಲ್ಲ, ಆದರೆ 2010 ರಲ್ಲಿ ಹಾಕಿದ್ದೆವು. ಆ ಖುರ್ಷಿದ್ ಇವರು ಆ ದಾವೆಯನ್ನು Specific Performance ಸಲುವಾಗಿ ಹಾಕಿದ್ದರು. ಅದರಲ್ಲಿ ನಮ್ಮ ತಂದೆ ಮತ್ತು ನಮ್ಮ ದೊಡಪ್ಪ ಖರೀದಿ ಕರಾರು ಪತ್ರ ಮಾಡಿಕೊಟ್ಟಿದ್ದಾರೆಂದು ಖುರ್ಷಿದ್ ಇವರು ಆ ದಾವೆ ಹಾಕಿದ್ದರು. ದಿಃ 6.4.2005 ರಂದು ಆ ಖರೀದಿ ಕರಾರು ಪತ್ರ ಮಾಡಿಕೊಟ್ಟಿದ್ದಾರೆಂದು, ಆ ದಾವೆ ಹಾಕಿದ್ದರು ಅಂದರೆ ನನಗೆ ಗೊತ್ತಿಲ್ಲ. ಆ ದಾವೆ ಹಾಕಿದ ನಂತರ ಆ ಕರಾರು ಪತ್ರದ ಬಗ್ಗೆ ನಮಗೆ ಗೊತ್ತಾಗಿದೆ. ಆ ದಾವೆ ದಿಃ 10.8.2016 ರಂದು ವಜಾ ಆಗಿತ್ತು ಅಂದರೆ ಸರಿ. ಅದರ ಮೇಲೆ ಖುರ್ಷಿದ್ ಇವರು ಆರ್ ಎ ನಂಃ 187/16 ಸಲ್ಲಿಸಿದ್ದರು ಅಂದರೆ ಸರಿ. ಅದನ್ನು ದಿಃ 20.09.2017 ರ ಆದೇಶದ ಮೂಲಕ ರಿಮ್ಯಾಂಡ ಮಾಡಲಾಗಿತ್ತು ಅಂದರೆ ಸರಿ. ಆ ದಾವೆ ಪುನಃ ದಿಃ 20.12.2018 ಕ್ಕೆ ವಜಾ ಆಗಿತ್ತು ಅಂದರೆ ಸರಿ. ಅದರ ಮೇಲೆ ಪುನಃ ಆತ ಆರ್ ಎ ನಂಃ 25/19 ಹಾಕಿದ್ದರು ಅಂದರೆ ಸರಿ. ಅದು ಸಹಿತ ದಿಃ 30.07.2020 ರಂದು ವಜಾ ಆಯಿತು ಅಂದರೆ ಸರಿ.

ನಾವು ಅಸಲು ದಾವೆ ನಂಃ 217/10 ರಲ್ಲಿ III Party Application ಹಾಕುವ ಕಾಲಕ್ಕೆ ನಮಗೆ ಎಲ್ಲಾ ವಾದಿಗಳಿಗೆ 4 ರಿಂದ 6 ನೇ ಪ್ರತಿವಾದಿಗಳಿಗೆ ಮಾಡಿದ ಖರೀದಿ ಪತ್ರದ ಬಗ್ಗೆ ನಮಗೆ ಗೊತ್ತಿತ್ತು ಅಂದರೆ ಸಾಕ್ಷಿಯು 2010 ರಲ್ಲಿಯೇ ನಾವು ಆ ಅರ್ಜಿ ಹಾಕಿದ್ದೆವು ಆವಾಗಲೇ ನಮಗೆ ಅದರ ಬಗ್ಗೆ ಗೊತ್ತಿತ್ತು ಎಂದು ಹೇಳುತ್ತಾರೆ.

ನಾವು 13 ಜನ ಕೂಡಿ ಈ ದಾವೆಯನ್ನು ಮಾಡಿದ್ದೇವೆ ಅಂದರೆ ಸರಿ. ನಾವು ಎಲ್ಲಾ 13 ಜನ ವಾದಿಗಳು ಒಬ್ಬರಿಗೊಬ್ಬರು ಒಳ್ಳೆಯ ಸಂಬಂಧ ಹೊಂದಿದ್ದೇವೆ ಮತ್ತು ನಾವು ಪರಸ್ಪರ ಒಳ್ಳೆಯ ಪ್ರೀತಿ - ವಾತ್ಸಲ್ಯ ಹೊಂದಿದ್ದೇವೆ ಮತ್ತು ಪರಸ್ಪರರು ಮನೆಗಳಿಗೆ ಹೋಗಿ-ಬಂದು ಮಾಡುತ್ತೇವೆ ಅಂದರೆ ಸರಿ.

**OS: 115-15** **PW-1**

ನನಗೆ 2010 ನೇ ಇಸ್ವಿಯಲ್ಲಿ ಡೆಲಿವರಿ ಆಗಿತ್ತು ಅಂದರೆ ಸರಿ. ಆಗ ನಮ್ಮ ತಾಯಿ ನನ್ನ ಜೊತೆ ಆಸ್ಪತ್ರೆಯಲ್ಲಿದ್ದಳು ಅಂದರೆ ಸರಿ. ಆಗ ನನ್ನ ತಮ್ಮ 5 ನೇ ವಾದಿ ರುದ್ರಗೌಡ ಲಾರಿಯಲ್ಲಿ ಚಾಲಕ ಅಂತಾ ಕೆಲಸ ಮಾಡುತ್ತಿದ್ದ. ಆ ಕಾರಣ ನಾನು, ನನ್ನ ತಾಯಿ ಮತ್ತು ನನ್ನ ತಮ್ಮ ರಾಯ್ಕರ ಎನ್ನುವವರಿಗೆ ಒಟ್ಟು ಮೊಕ್ತೆಯಾರ ಪತ್ರ ಮಾಡಿ ನೋಂದ ಮಾಡಿಕೊಟ್ಟಿದ್ದೆವು ಅಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದರು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.